<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>

**ಸಿಸಿ ನಂ. 101/2018**

| | | | |
|---|---|---|---|
| ಹೆಸರು | : | ಸಂತೋಷಕುಮಾರ | **ಚಾ.ಸಾ13** |
| ತಂದೆಯ ಹೆಸರು | : | ಬಸವರಾಜ | **ಪ್ರಾ.ಸಾ.12** |
| ವಯಸ್ಸು | : | **43 ವರ್ಷ** | **ದಿನಾಂಕಃ 11-07-2023** |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ರಾಯಕೋಡ | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

ಆರೋಪಿತರು ನನಗೆ ಗೊತ್ತು. ಪ್ರಾಸಾ-3 ನಮ್ಮ ಮನೆ ಪಕ್ಕದವರು.

10-07-2016 ರಂದು ಪ್ರಾಸಾ-3 ಹಾಗೂ 1ನೇ ಆರೋಪಿಯ ಮದುವೆ ರಾಯಕೊಡದಲ್ಲಿರುವ ಶಿವಲಿಂಗೇಶ್ವರ ಮಠದಲ್ಲಿ ಆಗಿರುತ್ತದೆ. ಒಂದು ತಿಂಗಳ ಕಾಲ 1ನೇ ಆರೋಪಿ ಪ್ರಾಸಾ-3 ರವರಿಗೆ ಸರಿಯಾಗಿ ನೋಡಿಕೊಂಡು 1ನೇ ಆರೋಪಿ ಪ್ರಾಸಾ-3 ರವರಿಗೆ ವರದಕ್ಷಿಣೆ ತವರು ಮನೆಯಿಂದ ಪಡೆದುಕೊಂಡು ಬರಲು ಕಿರುಕುಳ ನೀಡುತಿದ್ದರು. ಎರಡು ಬಾರಿ ನಾವು ಸೇರಿ ಪಂಚಾಯತಿ ಮಾಡಿರುತ್ತೇವೆ. ಆ ಕಾಲಕ್ಕೆ 1ನೇ ಆರೋಪಿ ಪ್ರಾಸಾ-3 ರ ವರಿಗೆ ಚನ್ನಾಗಿ ನೋಡಿಕೊಳ್ಳುತ್ತೇನೆ ಹಾಗೂ ಹೊಡೆಬಡೆ ಮಾಡುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾನೆ.

ಆರು ತಿಂಗಳು ಆದ ಮೇಲೆ 1ನೇ ಆರೋಪಿ ಪ್ರಾ-3 ರವರಿಗೆ ಮನೆಕಟ್ಟಲು ಹಣ ಸಾಕಾಗುತ್ತಿಲ್ಲ ತವರು ಮನೆಯಿಂದ ಹಣ ಪಡೆದುಕೊಂಡು ಬಾ ಎಂದು ಕಿರುಕುಳ ನೀಡುತಿದ್ದ. ಇದರ ಬಗ್ಗೆ ಪ್ರಾಸಾ-3 ರವರು ನನಗೆ ಪಂಚಾಯತಿಯಲ್ಲಿ ಹಾಗೂ ತಮ್ಮ ತವರು ಮನೆಗೆ ಬಂದಾಗ ನನಗೆ ತಿಳಿಸಿರುತ್ತಾರೆ.

ದಿನಾಂಕಃ 10-10-2017 ರಂದು ಚಾಸಾ-12 ರವರು ನನಗೆ ಕರೆ ಮಾಡಿ ಪ್ರಾಸಾ-3 ರವರು ಪ್ರಜ್ಞೆ ತಪ್ಪಿ ಬಿದ್ದಿರುತ್ತಾರೆ ಆದ್ದರಿಂದ ಆಸ್ಪತ್ರೆಗೆ ಹೋಗೋಣ ಬಾ ಎಂದು ಕರೆದಿರುತ್ತಾರೆ. ಆದ್ದರಿಂದ ನಾನು, ಪ್ರಾಸಾ-5, ಚಾಸಾ-12, ಪ್ರಾಸಾ-11, ಪ್ರಾಸಾ-6 ರವರು ಸೇರಿ ಸೇಡಂದಲ್ಲಿರುವ ಸರಕಾರಿ ಆಸ್ಪತ್ರೆಗೆ ಮಧ್ಯಾಹ್ನ 1 ರಿಂದ 1.30 ಗಂಟೆ ಸುಮಾರಿಗೆ ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ವೈದ್ಯರು ದೂರು ನೀಡಿದರೆ ಚಿಕಿತ್ಸೆ ನೀಡುತ್ತೇವೆಂದು ತಿಳಿಸಿದ ಕಾರಣ ಚಾಸಾ -12 ರವರು ದೂರನ್ನು

ನೀಡಿರುತ್ತಾರೆ.

ನಾನು ನೋಡಿದಾಗ ಪ್ರಾಸಾ-3 ರವರು ಪ್ರಜ್ಞೆ ತಪ್ಪಿದ್ದರು. ಅವರಿಗೆ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಪ್ರಾಸಾ-3 ರವರು ಸಂಜೆ 5 ರಿಂದ 5.30 ಗಂಟೆ ಸುಮಾರಿಗೆ ನನ್ನ ಗಂಡ ಹೊಡೆದು ಓಡಣಿಯಿಂದ ಉರುಲು ಹಾಕಿರುತ್ತಾನೆ ಎಂದು ತಿಳಿಸಿರುತ್ತಾರೆ. ಆ ಸಮಯದಲ್ಲಿ ನಾನು ಆಸ್ಪತ್ರೆಯಲ್ಲೆ ಇದ್ದೆ. ನಂತರ ಅವರು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ ನಾನು ಮರಳಿ ನಮ್ಮ ಮನಗೆ ಬಂದಿರುತ್ತೇನೆ. ಘಟನೆಯ ಬಗ್ಗೆ ನಾನು ಪೊಲೀಸರಿಗೆ ಹೇಳಿದ್ದೇನೆ.

ನಂತರ ಒಂದು ವರ್ಷದ ಆದ ಮೇಲೆ 1 ನೇ ಆರೋಪಿ ಇನ್ನೊಂದು ಮದುವೆ ಆಗುತ್ತಾನೆ ಎಂದು ನನಗೆ ತಿಳಿದುಬಂದಿರುತ್ತದೆ. ಆದ್ದರಿಂದ ನಾನು 1 ನೇ ಆರೋಪಿಗೆ ಬೇರೆ ಮದುವೆ ಆಗಬೇಡ ಎಂದು ತಿಳಿಸಿ ಹೇಳಿರುತ್ತೇವೆ. ಚಾಸಾ-14 ರವರು 1 ನೇ ಆರೋಪಿ ಇನ್ನೊಂದು ಮದುವೆ ಆಗಿರುವ ಬಗ್ಗೆ ತಿಳಿಸಿರುತ್ತಾರೆ ಹಾಗೂ ಇನ್ನೊಂದು ಮದುವೆಯಿಂದ ಒಂದು ಮಗು ಸಹ ಆಗಿರುತ್ತದೆ ಎಂದು ತಿಳಿಸಿರುತ್ತಾರೆ.

ಈಗ ನೋಡುತಿರುವ ಜಪ್ತಿ ಪಂಚನಾಮೆಯಲ್ಲಿರುವ ಸಹಿ ನನ್ನದೆ. ಸದರಿ ಜಪ್ತಿ ಪಂಚನಾಮೆ ನಿಪಿ-8 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ದಿನಾಂಕಃ 17-10-2017 ರಂದು ಮಧ್ಯಾಹ್ನ 12 ರಿಂದ 12.30 ಗಂಟೆ ಸಮಯಕ್ಕೆ ರಾಯಕೋಡ ಗ್ರಾಮದಲ್ಲಿ ಸಹಿ ಮಾಡಿರುತ್ತೇನೆ. ಪೊಲೀಸರು ಪಂಚನಾಮೆ ಮಾಡಲು ಬಂದಾಗ ಸಹಿ ಮಾಡಿದ್ದೇನೆ. ನನ್ನ ಸಮಕ್ಷಮ ಒಂದು ಓಡಣಿ ಜಪ್ತಿ ಮಾಡಿಕೊಂಡಿರುತ್ತಾರೆ. ಓಡಣಿ ನೋಡಿದರೆ ಗುರುತಿಸುತ್ತೇನೆ. ಈಗ ನೋಡುತ್ತಿರುವ ಮು.ಮಾ-1 ನ್ನು ಪೊಲೀಸರು ನನ್ನ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತಾರೆ. ನಿಪಿ-4 ರಭಾವಚಿತ್ರದಲ್ಲಿ ನಾನು, ಚಾಸಾ-19 ರವರು ಇದ್ದಾರೆ. ನಿಪಿ-4 ರ ಭಾವಚಿತ್ರ ಜಪ್ತಿ ಮಾಡುವ ಕಾಲಕ್ಕೆ ಪಡೆದುಕೊಳ್ಳಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀಎಸ್. ಬಿ. ಕೆ. ವಕೀಲರು ಸಮಯ ಕೋರಿದ್ದರಿಂದ 500-00 ಖರ್ಚು ಕೊಡಲು ಆದೇಶಿಸಿ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**